ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 132-138
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮುಸ್ಲಿಂ ಮಹಿಳಾ ಸಂವೇದನೆಯ ಅಭಿವ್ಯಕ್ತಿಯಾಗಿ ಹಸೀನಾ

**ಶಶಿಕಲಾ ಎ.ಎಸ್[1] ಮತ್ತು ಡಾ. ಎಂ ಮುನಿರಾಜಪ್ಪ[2]**
[1]ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಮ್ಮಲೂರು, ಬೆಂಗಳೂರು
[2]ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು ಇತಿಹಾಸ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

***Abstract:***
*ಭಾರತದ ಇತಿಹಾಸ ಪುಟಗಳನ್ನು ಮೆಲುಕಿ ಹಾಕಿದಾಗ, ಮಹಿಳೆಯರ ಶೋಷಣೆ, ಗುಲಾಮಗಿರಿ ಹಾಗೂ ಸ್ಥಾನಮಾನಗಳ ಕುರಿತು ದಿಗ್ಭ್ರಮೆಯಂತಹ ಅನೇಕ ಸತ್ಯಾಂಶಗಳು ಇಂದಿಗೂ ಕಾಣಬಹುದು. ಪುರಾಣಗಳು, ಗ್ರಂಥಗಳು, ಲಾವಣಿಗಳು, ಜನಪದ ಗೀತೆಗಳ ಹಾಗೂ ಬೀದಿ ನಾಟಕಗಳ ಮೂಲಕ ಪುರುಷ ಪ್ರಧಾನ್ಯತೆಯನ್ನು ಎತ್ತಿ ತೋರುವ, ಹೆಣ್ಣು ಅಶಕ್ತಳೆಂಬಂತೆ ಗುರಿತಿಸುವ ವ್ಯವಸ್ಥೆ, ಮಹಿಳಾ ಧ್ವನಿ ಹೊರಬರುವವರೆಗೂ ನಿಲ್ಲಲಿಲ್ಲ. ಬಂಗಾಳಿ, ಹಿಂದಿ, ಉರ್ದು, ಕನ್ನಡ, ತಮಿಳು, ತೆಲುಗು ಇತರೆ ಭಾಷೆಯ ಸಾಹಿತ್ಯದ ಮೂಲಕ ಮಹಿಳೆಯರ ಗೌರವವನ್ನು ಎತ್ತಿ ಹಿಡಿಯಲು, ಅವರ ಸ್ಥಾನಮಾನವನ್ನು ಸಬಲೀಕರಣಗೊಳಿಸಲು ಅನೇಕ ಮಹಿಳಾ ಸ್ತ್ರೀವಾದಿಗಳು ತಮ್ಮ ಅನುಭವ ಮತ್ತು ಜ್ಞಾನದಿಂದ ಜಗತ್ತಿಗೆ ಪರಿಚಯಿಸಲು ಮುಂದಾದರು. ಇದರ ಜೊತೆ ತಮ್ಮ ಕೃತಿಗಳನ್ನು ಸಿನಿಮಾ ರೂಪದಲ್ಲಿ ಹೊರತಂದು ನೈಜತೆಯನ್ನು ಸಾರಿದರು.*

***Keywords:*** *ಕರ್ನಾಟಕ ಇತಿಹಾಸ, ಮುಸ್ಲಿಂ ಸಮುದಾಯ, ಮಹಿಳಾ ಸಂವೇದನೆ, ಹಸೀನಾ, ಕರಿ ನಾಗರಗಳು*

## ಪೀಠಿಕೆ

ಕರ್ನಾಟಕದಲ್ಲಿ ಸಾಹಿತ್ಯದ ಜೊತೆ ಜೊತೆಯಲ್ಲೇ ನಾಟಕ, ಸಿನಿಮಾ ಮೂಲಕ ಮಹಿಳೆಯರಲ್ಲಿ ಸಾಂಪ್ರದಾಯಿಕ ಮೌಢ್ಯತೆಯನ್ನು ಹೊಗಲಾಡಿಸಿ, ಅವರ ಏಳಿಗೆಗೆ ಶ್ರಮಿಸಲು ಮುಂದಾದರು. ಕನ್ನಡ ಸಿನಿಮಾದ ಹಿನ್ನೆಲೆಯು ಸುಮಾರು 95 ವರ್ಷಗಳ ಇತಿಹಾಸವನ್ನು ಒಳಗೊಂಡಿದೆ. 60ರ ದಶಕದ ನಂತರ ಕನ್ನಡ ಸಿನಿಮಾದಲ್ಲಿ ಮಹಿಳಾ ಕೇಂದ್ರಿತ ನೆಲೆಗಳ ಕುರಿತಂತೆ ಚಲನಚಿತ್ರಗಳು ಆರಂಭವಾದವು. ಕನ್ನಡ ಸಿನಿಮಾ ಮಹಿಳಾ ಕೇಂದ್ರಿತ ನೆಲೆಗಳ ಪಿತಾಮಹ ಎಂದು ಶ್ರೀಯುತ ಎಸ್ ಆರ್ ಪುಟ್ಟಣ್ಣ ಕಣಗಾಲ್ ರವರನ್ನು ಕರೆಯಬಹುದು. ಇವರು 'ಕಪ್ಪು ಬಿಳುಪು' ಸಿನಿಮಾದ ಮೂಲಕ ಕನ್ನಡ ಸಿನಿಮಾಗಳಲ್ಲಿ ಮಹಿಳಾ ಪ್ರಾಧಾನ್ಯತೆ ನೆಲೆಯನ್ನು ಮೊದಲು ಪರಿಚಯಿಸಿದರು. ನಂತರದ ದಿನಗಳಲ್ಲಿ ಇವರ ಹಾದಿಯನ್ನು ಮೆಟ್ಟಿದವರು ನಿರ್ದೇಶಕರುಗಳಾದ ಗಿರೀಶ್ ಕಾಸರವಳ್ಳಿ, ಟಿ ಎಸ್ ನಾಗಭರಣ, ಬರಗೂರು ರಾಮಚಂದ್ರಪ್ಪ, ಗಿರೀಶ್ ಕಾರ್ನಾಡ್, ಸುಮನಾ ಕಿತ್ತೂರು ಮುಂತಾದವರು. 2004ರಲ್ಲಿ ಗಿರೀಶ್ ಕಾಸರವಳ್ಳಿಯವರು ನಿರ್ದೇಶಿಸಿದ 'ಹಸೀನಾ' ಸಿನಿಮಾ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಸಂವೇದನೆಯನ್ನು ಹೇಗೆ

***Please cite this article as:*** ಶಶಿಕಲಾ ಎ.ಎಸ್ ಮತ್ತು ಎಂ ಮುನಿರಾಜಪ್ಪ. (2026). ಮುಸ್ಲಿಂ ಮಹಿಳಾ ಸಂವೇದನೆಯ ಅಭಿವ್ಯಕ್ತಿಯಾಗಿ ಹಸೀನಾ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 132–138

ನಿರೂಪಿದೆ, ಎಂಬುದನ್ನು ಈ ಲೇಖನದಲ್ಲಿ ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ಹಸೀನಾ ಸಿನಿಮಾವು 2025ನೇ ಸಾಲಿನ ಕನ್ನಡ ಭಾಷೆಗೆ ಮೊದಲ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ತಂದುಕೊಟ್ಟ ಬಾನು ಮುಷ್ತಾಕ್ ರವರ ಅನುವಾದಿತ ಕೃತಿ 'ಹಾರ್ಟ್ ಲ್ಯಾಂಪ್' ನ 'ಕರಿ ನಾಗರಗಳು' ಎಂಬ ಸಣ್ಣ ಕಥೆಯನ್ನು ಆಧರಿಸಿದೆ.

**ಸಿನಿಮಾದ ಚಿತ್ರಣ:**

ಹಸೀನಾ–2004, ನಿರ್ದೇಶಕ–ಗಿರೀಶ್ ಕಾಸರವಳ್ಳಿ, ಮೂಲ ಕಥೆ–ಬಾನುಮುಷ್ತಾಕ್ ರವರ–ಕರಿನಾಗರಗಳು, ನಿರ್ಮಾಣ–ಐ.ಪಿ ಮಲ್ಲೇಗೌಡ, ಸಂಗೀತ–ಥಾಮಸ್ ಕೊಟ್ಟುಕಪಲ್ಲಿ, ಛಾಯಾಗ್ರಹಣ–ರಾಮಚಂದ್ರ ಐತಾಳ್, ನಟನೆ–ತಾರ, ಚಂದ್ರಹಾಸ್ ಉಲ್ಲಾಳ್, ಬೋಧಿನಿ ಭಾರ್ಗವ್ ಮುಂತಾದವರು. ಪ್ರಶಸ್ತಿಗಳು–ರಾಷ್ಟ್ರ ಪ್ರಶಸ್ತಿ, ಅತ್ಯುತ್ತಮ ನಟಿ–ತಾರ, ರಾಜ್ಯ ಪ್ರಶಸ್ತಿ–ಅತ್ಯುತ್ತಮ ನಿರ್ದೇಶಕ–ಗಿರೀಶ್ ಕಾಸರವಳ್ಳಿ, ಅತ್ಯುತ್ತಮ ಬಾಲ ನಟಿ–ಬೋಧಿನಿ ಭಾರ್ಗವ್.

**ಹಸೀನಾ**

ಈ ಸಿನಿಮಾವು ಮಸೀದಿಯ ಮುಂದೆ ಒಬ್ಬ ಮುಸ್ಲಿಂ ಬಸುರಿ ಹೆಣ್ಣು ಮಗಳು ತನ್ನ ಮೂರು ಹೆಣ್ಣು ಮಕ್ಕಳೊಡನೆ ಕುಳಿತಿರುವ ದೃಶ್ಯದಿಂದ ಆರಂಭವಾಗುತ್ತದೆ. ಇಸ್ಲಾಂ ಧರ್ಮದ (ಷರಿಯತ್ ಕಾನೂನು) ಪ್ರಕಾರ ಮುಸ್ಲಿಂ ಹೆಣ್ಣು ಮಕ್ಕಳಿಗೆ ಮಸೀದಿಯ ಒಳಗೆ ಪ್ರವೇಶ ಇರುವುದಿಲ್ಲ, ಹಾಗೆಯೇ ಮುಸ್ಲಿಂ ಹೆಣ್ಣು ಮಕ್ಕಳು ಹೆಚ್ಚಾಗಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳಬಾರದೆಂಬ ನಂಬಿಕೆ ಹೆಚ್ಚಿದೆ. ಇಂತಹ ಸಂದರ್ಭದಲ್ಲಿ ಹಸೀನಾ ಎನ್ನುವ ಹೆಣ್ಣು ಮಗಳೊಬ್ಬಳು ಮಸೀದಿಯ ಮುಂದೆ ಉಪವಾಸ ಸತ್ಯಾಗ್ರಹ ಕೂರುವ ಮೂಲಕ ಗಾಂಧೀಜಿಯವರ ಹೋರಾಟದ ದಾರಿಯನ್ನು ನೆನಪಿಸುತ್ತ, ಜೊತೆಗೆ ಮುಸ್ಲಿಂ ಸಮುದಾಯದಲ್ಲಿ ಒಂದು ಹೊಸ ಕ್ರಾಂತಿಯ ಅಲೆಯನ್ನು ಎಬ್ಬಿಸಿರುವುದನ್ನು ನಾವು ಮನಗಾಣಬಹುದು. ಹಸೀನಾ ಒಬ್ಬ ಸಾಮಾನ್ಯ ಮುಸ್ಲಿಂ ಹೆಣ್ಣು ಮಗಳು, ಆಟೋರಿಕ್ಷ ಓಡಿಸುವ ಯಾಕೊಬ್ ಎಂಬುವವನನ್ನು ಅವನ ತಾಯಿಯ ವಿರೋಧದಲ್ಲಿ ವರಿಸಿರುತ್ತಾಳೆ. ಮೂರು ಹೆಣ್ಣು ಮಕ್ಕಳು ಜನಿಸಿದ ಮೇಲೂ ಯಾಕೂಬ್ ಹಸೀನಾಳ ಜೊತೆ ಪ್ರೀತಿಯಿಂದಲೇ ಇರುತ್ತಾನೆ. ಆದರೆ ನಾಲ್ಕನೆಯ ಮಗುವು ಹೆಣ್ಣು ಎಂದು ಗೊತ್ತಾದ ಮೇಲೆ ಅವನ ನಡುವಳಿಕೆ ಬದಲಾಗುತ್ತದೆ. ಅವನು ಹಸೀನಾಳ ಕಣ್ಣು ತಪ್ಪಿಸಿ ಓಡಾಡುತ್ತಾನೆ, ಮತ್ತೆ ಎರಡನೇ ಮದುವೆಗೆ ತಯಾರಿ ನಡೆಸುತ್ತಿರುತ್ತಾನೆ. ಇದನ್ನು ತಿಳಿದ ಹಸೀನಾ ದಂಗಾಗುತ್ತಾಳೆ. ಅವಳ ಬದುಕು ಮುಗಿಯಿತು ಎಂಬಂತೆ ಪರಿತಪಿಸುತ್ತಾಳೆ, ಸುಧಾರಿಸಿಕೊಂಡು ಜುಲೇಖ ಬೇಗಂ ರವರ ಮನೆ ಕೆಲಸಕ್ಕೆ ಸೇರುತ್ತಾಳೆ. ಜುಲೇಖ ಬೇಗಂ ಒಬ್ಬ ವಿದ್ಯಾವಂತ ಹಾಗೂ ಧೈರ್ಯವಂತ ಹೆಣ್ಣುಮಗಳು. ಅವಳು ಇಸ್ಲಾಂ ಧರ್ಮದ ಬಗ್ಗೆ ಹೆಚ್ಚು ಜ್ಞಾನವನ್ನು ಹೊಂದಿರುತ್ತಾಳೆ. ಇವಳ ಮೂಲಕ ಹಸೀನಾ ತನ್ನ ಹಕ್ಕುಗಳ ಬಗ್ಗೆ ಮಾಹಿತಿ ಪಡೆದು ಹೋರಾಟಕ್ಕೆ ಇಳಿಯುತ್ತಾಳೆ. ಕೊನೆಗೆ ತನ್ನ ಮುನ್ನಿಯ ಜೀವನದ ಅಂತ್ಯವನ್ನು ಕಂಡು ಆಕ್ರೋಶದಿಂದ ಯಾಕೂಬನನ್ನು ಹಾಗೂ ಜಮಾತ್ ನ್ಯಾಯವನ್ನು ಧಿಕ್ಕರಿಸಿ ಹೊರಡುತ್ತಾಳೆ.

ಮೂಲ ಕಥೆಯನ್ನು ಸಿನಿಮಾದಲ್ಲಿ ಕಾಸರವಳ್ಳಿ ಅವರು ಹೆಚ್ಚು ಅಂಶಗಳನ್ನು ಬದಲಾಯಿಸಿದ್ದರೂ ಕಥೆಗೆ ಧಕ್ಕೆಯಾಗದಂತೆ ಸಿನಿ ಪ್ರೇಕ್ಷಕರ ಮುಂದೆ ಇಟ್ಟಿದ್ದಾರೆ. ಮೂಲ ಕಥೆಯಲ್ಲಿ ಹಸೀನಾ ಆಶ್ರಫ್ ಮೊದಲ ಮಗಳಾಗಿದ್ದಾಳೆ, ಮುನ್ನಿ ಮೂರನೆಯ ಹೆಣ್ಣು ಮಗುವಾಗಿದೆ. ಕಥೆಗಳ ಭಿನ್ನತೆ ಏನೇ ಇದ್ದರೂ ಸಾಹಿತ್ಯ ಮತ್ತು ಸಿನಿಮಾದ ಉದ್ದೇಶ ಮಾತ್ರ ಮುಸ್ಲಿಂ ಮಹಿಳೆಯರ ಶೋಷಣೆಗಳನ್ನು ವ್ಯಕ್ತ ಪಡಿಸುವುದೇ ಆಗಿದೆ. ಸ್ವತಃ ಬಾನು ಮುಷ್ತಾಕ್ ರವರು ಮುಸ್ಲಿಂ ಸಮುದಾಯದ ಅನುಭವಗಳನ್ನು ನೇರವಾಗಿ ಉಂಡು ಅನುಭವಿಸಿರುವ ಅಂಶಗಳು ಈ ಕಥೆಯಲ್ಲಿ ನಮಗೆ ಕಾಣಿಸುತ್ತವೆ.

ಪ್ರಪಂಚದ ಯಾವುದೇ ಧರ್ಮಗಳ ಮೂಲಭೂತ ನಂಬಿಕೆಗಳು ಯಾವ ಜೀವಿಗಳ ವಿರುದ್ಧವೂ ಇರುವುದಿಲ್ಲ, ಎಂಬ ಸಾರ್ವಜನಿಕ ಸತ್ಯವನ್ನು ಮರೆಮಾಚಿ ಪುರುಷ ಪ್ರಧಾನ ಸಮಾಜ ಅನಾದಿ ಕಾಲದಿಂದಲೂ ಹೆಣ್ಣನ್ನು ಶೋಷಿಸುತ್ತ ಬಂದಿರುವುದನ್ನು ನಾವು ಎಲ್ಲಾ ಸಮಾಜಗಳಲ್ಲಿಯೂ ಕಾಣಬಹುದು. ಕೆಲವು ಸಮಾಜಗಳಲ್ಲಿ ಮಹಿಳೆಯರು ಬಹಳ ಬೇಗ ಎಚ್ಚೆತ್ತು, ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಿ ತಮ್ಮ ಹಕ್ಕುಗಳನ್ನು ಪಡೆದುಕೊಂಡಿರುವ ಉದಾಹರಣೆಗಳು ನಮ್ಮಲ್ಲಿ ಎಷ್ಟೇ ಇದ್ದರೂ, ಇನ್ನೂ ಮಹಿಳೆಯರ ಸಮಸ್ಯೆಗಳು ಬಗೆಹರಿದಿಲ್ಲವೆಂಬುದನ್ನು ನಾವು ಹಸೀನಾ ಸಿನಿಮಾದಲ್ಲಿ ನೋಡಬಹುದು. ಮುಸ್ಲಿಂ ಮಹಿಳೆಯರ ಸಮಸ್ಯೆಗಳನ್ನು ಕಟ್ಟಿಕೊಡುವಲ್ಲಿ ಗಿರೀಶ್ ಕಾಸರವಳ್ಳಿ ಅವರ ಪಾತ್ರ ಬಹುದೊಡ್ಡ ಕೊಡುಗೆಯಾಗಿದೆ. ತಾರಾ ಹಸೀನಾ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಮುಸ್ಲಿಂ ಹೆಣ್ಣು ಮಗಳಂತೆ ಸಹಜ ಅಭಿನಯ ಮತ್ತು ಚಂದ್ರಹಾಸ ಉಳ್ಳಾಳರು ಕೆಡುಕ ಗಂಡ ಯಾಕೊಬನ ಪಾತ್ರಕ್ಕೆ ಪರಕಾಯ ಪ್ರವೇಶ ಮಾಡಿದ್ದಾರೆ. ಬೋಧಿನಿ ಭಾರ್ಗವ ಅಂಗವಿಕಲ ಮುನಿಯ ಪತ್ರಿಕೆ ನ್ಯಾಯ ಒದಗಿಸಿದ್ದಾರೆ. ಥಾಮಸ್ ಕೊಟ್ಟು ಕಪ್ಪಲ್ಲಿ ಅವರ ಹಿನ್ನೆಲೆ ಸಂಗೀತ ಹಸೀನಾಳ ಮೂಕ ವೇದನೆಗಳನ್ನು ಮನಸ್ಸಿಗೆ ಹತ್ತಿರವಾಗಿಸುತ್ತದೆ. ಮಸೀದಿಯ ಪ್ರಾರ್ಥನೆಗಳು (ನಮಾಜ್) ಹಸೀನಾಳ ಕಷ್ಟಗಳನ್ನು ಅಲ್ಲಾಹನಿಗೆ ತಲುಪಿಸುವ ಕಾರ್ಯವನ್ನು ಮಾಡುವಂತೆ ಭಾಸವಾಗುತ್ತದೆ. ರಾಮಚಂದ್ರ ಐತಾಳರ ಛಾಯಾಗ್ರಹಣ ಮುಸ್ಲಿಂ ಸಮುದಾಯದ ನೈಜ ಚಿತ್ರಣವನ್ನು ನಮಗೆ ಕಟ್ಟಿಕೊಡುತ್ತದೆ.

**ಕರಿನಾಗರಗಳು:**

ಇನ್ನು ಮೂಲ ಕಥೆ 'ಕರಿನಾಗರಗಳು' ಮುಷ್ತಾಕರ ಸಣ್ಣ ಕಥೆಗಳಲ್ಲಿ ಒಂದು ಅತ್ಯುತ್ತಮ ಕಥೆ ಎನ್ನಬಹುದು. ಮುಸ್ಲಿಂ ಸಮುದಾಯದ ನೈಜತೆಯನ್ನು ಚಿತ್ರಿಸುವಲ್ಲಿ ಬಾನು ಯಶಸ್ಸನ್ನು ಕಂಡಿದ್ದಾರೆ. ಆಶ್ರಫ ಆಟೋರಿಕ್ಷಾ ಓಡಿಸುವ ಯಾಕೂಬನ ಹೆಂಡತಿ ಮತ್ತು ಮೂರು ಹೆಣ್ಣು ಮಕ್ಕಳ ತಾಯಿ. ಹಸೀನಾ ಮೊದಲ ಮಗಳು ಹಬೀಬ ಎರಡನೇ ಮಗಳು ಮೂರನೇ ಕೂಸೇ ಮುನ್ನಿ[1]. "ಅವಳು ಹುಟ್ಟಿದ ನಂತರವೇ ಅವಳ ಕಷ್ಟಗಳೆಲ್ಲ ಪರಾಕಾಷ್ಟತೆಯನ್ನು ಮುಟ್ಟಿತು" ಈ ಸಾಲಿನ ಮೂಲಕ ಬಾನು ರವರು ಆಶ್ರಫಳ ಕಷ್ಟದ ಸಂದರ್ಭವನ್ನು ವಿವರಿಸುತ್ತಾರೆ. ಯಾಕೂಬ್ ಮೂರು ಹೆಣ್ಣು ಮಕ್ಕಳನ್ನು ಹಡೆದಳೆಂದು ಆಶ್ರಫಳನ್ನು ತೊರೆದು ಮತ್ತೊಂದು ವಿವಾಹವಾಗುತ್ತಾನೆ. ಈ ಮಧ್ಯದಲ್ಲಿ ಹಸೀನಾ ಶ್ರೀಮಂತ ಜುಲೇಖಳ ಮನೆಗೆಲಸಕ್ಕೆ ಸೇರುತ್ತಾಳೆ. ಜುಲೇಖ ಒಬ್ಬ ವಿದ್ಯಾವಂತ ಮತ್ತು ಶ್ರೀ ಮಂತ ಹೆಣ್ಣು ಮಗಳು. ಅವಳು ಇಸ್ಲಾಂ ಧರ್ಮದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದಿರುತ್ತಾಳೆ. ಅವಳು ಹಸೀನಾಳಿಗೆ ಅವಳ ಹಕ್ಕುಗಳ ಬಗ್ಗೆ ತಿಳಿಸಿ ಹೇಳುತ್ತಾಳೆ. ಹೆಣ್ಣು ಜನಿಸಿದರೆ ಮನೆಗೆ ಶುಭ ಎಂದು ಹೇಳುತ್ತಾಳೆ[2]. "ನಿನಗೆ ಗೊತ್ತಾ ಆಶ್ರಫ್ ಹೆಣ್ಣು ಹುಟ್ಟಿದರೆ ಆ ಮನೆಗೆ ಪ್ರವಾದಿ ಅವರ ಸಲಾಂ ಬಂದಂತೆ". ಈ ಮೇಲಿನ ವಾಕ್ಯ ಇಸ್ಲಾಂ ಧರ್ಮದ ಸ್ಥಾಪಕರದ ಪ್ರವಾದಿ ಮಹಮ್ಮದರು ಹೆಣ್ಣು ಮಕ್ಕಳ ಬಗ್ಗೆ ಹೊಂದಿದ್ದ ಗೌರವವನ್ನು ಸೂಚಿಸುತ್ತದೆ. ಈ ಮಾಹಿತಿಯನ್ನು ತಿಳಿಯದ ನಾವುಗಳು ಒಮ್ಮೊಮ್ಮೆ ಧರ್ಮ ಸಂಸ್ಥಾಪಕರನ್ನು ದೂರುವ ಉದಾಹರಣೆಗಳು ನಮ್ಮ ನಡುವೆ ಇವೆ. ಹೀಗೆ ಸಾಗುವ ಆಶ್ರಫಳ ಬದುಕು ಕೊನೆಗೆ ಶಾಂತಿಯ ಹೋರಾಟದ ಕಡೆಗೆ ಸಾಗುತ್ತದೆ. ಮೊದಲ ಬಾರಿಗೆ ಆಶ್ರಫ್ ಮಸೀದಿಯ ಮೆಟ್ಟಿಲು ಏರುತ್ತಾಳೆ. ನ್ಯಾಯವನ್ನು ಬೇಡುತ್ತಾಳೆ, ಆದರೆ ಅವಳಿಗೆ ಸಿಗುವ ನ್ಯಾಯ ಪತಿಯಿಂದ ನಿಂದನೆಯ ಮಾತುಗಳು ಮತ್ತು ಮುನ್ನಿಯ ಸಾವು[3]. "ಈ ಹೆಣ್ಣು ನಾಯಿಯಾದರೂ ಎರಡು ವರ್ಷದಿಂದ ತನ್ನ ಹಿಂದೆ ಸುತ್ತಿದ್ದಲ್ಲದೆ ನ್ಯಾಯ ಕೇಳಿ ಮಸೀದಿಯ ಮೆಟ್ಟಿಲನ್ನು ಹತ್ತಿಸಿಬಿಟ್ಟಳು" ಯಾಕೂಬನ ಈ ಮಾತುಗಳು ಅವನು ಹೆಣ್ಣಿನ ಬಗ್ಗೆ ಇರಿಸಿಕೊಂಡಿರುವ ಭಾವನೆಯನ್ನು ತೋರಿಸುತ್ತದೆ. ಕೊನೆಗೆ ಆಶ್ರಫ್

ಇಡೀ ಇಸ್ಲಾಂ ಸಮುದಾಯದ ರೀತಿ ರಿವಾಜುಗಳ ಬಗ್ಗೆ ಜಿಗುಪ್ಸೆ ಪಡುತ್ತಾಳೆ[4]. "ಯಾವ ಸುಖ ಸೂರೆಗೊಳ್ಳಲು ಅವಳು ಇಲ್ಲಿ ಇರಬೇಕಿತ್ತು, ನೋವಿನಿಂದ ಬಿಡುಗಡೆಯಾಗಿ ತನಗೂ ಬಿಡುಗಡೆಯನ್ನು ಕೊಡಿಸಿದ ಮುನ್ನಿ, ಇನ್ನು ತಾನು ಅವನ ಹಿಂದೆ ಹೋಗಿ ಗೋಗರಿಯಬೇಕಾದ್ದಿಲ್ಲ. ಈ ಮುತುವಲ್ಲಿಯ ಹಿಂದೆ ಹೋಗಿ ಬೇಡಬೇಕಾಗಿಲ್ಲ ಅಮಾನವೀಯ ಪ್ರಶ್ನೆಗಳಿಗೆ ಉತ್ತರಿಸಬೇಕಾದ್ದಿಲ್ಲ. ತಾನುಂಟು ತನ್ನ ಎರಡು ಮಕ್ಕಳು ಉಂಟು. ಎಂಬ ಈ ಮಾತುಗಳು ಅವಳ ಹೋರಾಟಕ್ಕೆ ಸಿಕ್ಕ ನಿರಾಶೆಯ ಫಲವನ್ನು ಸೂಚಿಸುತ್ತದೆ.

ಆಶ್ರಫಳ ಹೋರಾಟದ ಫಲವಾಗಿ ಆ ಗ್ರಾಮದ ಮುಸ್ಲಿಂ ಮಹಿಳಾ ಸಮುದಾಯದಲ್ಲಿ ಒಂದು ಹೊಸ ಸಂಚಲನ ಮೂಡುತ್ತದೆ. ಅಲ್ಲಿಯವರೆಗೂ ಮುತುವಲ್ಲಿಯ ಬಗ್ಗೆ ಅಪಾರವಾದ ಗೌರವವನ್ನು ಹೊಂದಿದ್ದ ಹನೀಫ ಚಿಕ್ಕಮ್ಮ ರಫಿಯಾ, ನಸೀಮ ಜಮೀಲಾ ಅತ್ತೆ ಎಲ್ಲರೂ ಶಪಿಸುವುದನ್ನು ಬಾನು ರವರು ಕಥೆಯ ಕೊನೆಯಲ್ಲಿ ಪ್ರಸ್ತಾಪಿಸಿದ್ದಾರೆ. ಸ್ವತಃ ಮುತುವಲ್ಲಿಯ ಪತ್ನಿ ಆಮಿನ ಹತ್ತು ಮಕ್ಕಳನ್ನು ಹೆತ್ತು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದು ಎಷ್ಟು ಬಾರಿ ಬೇಡಿಕೊಂಡಿದ್ದರೂ ಒಪ್ಪದ ಮುತ್ತುವಲ್ಲಿಯವರ ನಡವಳಿಕೆಯಿಂದ ಬೇಸತ್ತು ಸೊರಗಿ ಮನದಲ್ಲೇ ಕೊರಗುತ್ತಿದ್ದಳು. ಆಶ್ರಫಳ ಹೋರಾಟದ ಬೆಂಬಲದಿಂದ ಅವಳಿಗೆ ಒಮ್ಮೆಲೆ ಸ್ವತಂತ್ರ ಸಿಗುತ್ತದೆ ಎಂಬುದು ಅವಳ ಈ ಕೆಳಗಿನ ಮಾತುಗಳಿಂದ ತಿಳಿಯುತ್ತದೆ[5]. "ನೋಡಿ ಬಾಗಿಲು ಹಾಕ್ಕೊಂಡು ಮಕ್ಕಳನ್ನು ನೋಡ್ಕೊಳ್ಳಿ...ನಾನು ಬರೋದು ಒಂದು ವಾರದ ಮೇಲಾಗುತ್ತೆ" ಎಂಬ ಮಾತುಗಳನ್ನು ಥೇಟ್ ಮುತುವಲ್ಲಿ ಅವರ ಶೈಲಿಯಲ್ಲಿಯೇ ಅವರಿಗೆ ತಿರುಗಿಸಿ ಹೇಳುವುದು ಈ ಕಥೆಯಲ್ಲಿ ಬರುವ ಹಸೀನಾ ಹೋರಾಟದ ಫಲವನ್ನು ನಮಗೆ ತಿಳಿಸುತ್ತದೆ.

**ಸಿನಿಮಾ ಮತ್ತು ಕಥೆ ನಡುವಿನ ಭಿನ್ನತೆಗಳು**

ಒಂದು ಸಣ್ಣ ಕಥಾ ಸಾಹಿತ್ಯವು ಸಿನಿಮಾ ಆದಾಗ ಅದರ ವ್ಯಾಪ್ತಿ ಹೆಚ್ಚಾಗುವುದರ ಜೊತೆಗೆ ನೋಡುಗರ ಸಂಖ್ಯೆ ವೃದ್ಧಿಸುತ್ತದೆ. ಸಾಹಿತ್ಯ ಕೃತಿಗಳು ಕೇವಲ ಅಕ್ಷರ ಜ್ಞಾನವುಳ್ಳವರನ್ನು ಮಾತ್ರ ತಲುಪುತ್ತದೆ. ಆದರೆ, ಸಿನಿಮಾ ಅಕ್ಷರಸ್ಥರು ಹಾಗೂ ಅನಕ್ಷರಸ್ಥರು ಇವರಿಬ್ಬರಿಗೂ ತಲುಪಿ ಅನೇಕ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬದಲಾವಣೆಗಳಾಗಿರುವುದನ್ನು ಗುರುತಿಸಬಹುದು. ಇನ್ನು ಹಸೀನಾ ಸಿನಿಮಾ ಹೇಗೆ ಸಾಮಾಜಿಕವಾಗಿ ಪ್ರಭಾವ ಬೀರುತ್ತೆ ಎಂದು ಕೂಲಂಕುಷವಾಗಿ ಗಮನಿಸಿದಾಗ ತಿಳಿದುಬರುವ ಅಂಶಗಳೆಂದರೆ ಹಸೀನಾಳ ಮೂಲಕ ನಿರ್ದೇಶಕ ಹೋರಾಟದ ಸ್ವರೂಪವನ್ನು ಉತ್ತಮವಾಗಿ ಕಟ್ಟಿಕೊಟ್ಟಿದ್ದಾರೆ. ಬಸುರಿ ಹಸೀನಾಳು ಮಸೀದಿಯ ಮುಂದೆ ತನ್ನ ಮೂರು ಹೆಣ್ಣು ಮಕ್ಕಳೊಡನೆ ದೈನ್ಯ ಸ್ಥಿತಿಯಲ್ಲಿ ಕುಳಿತಿರುವುದನ್ನು ಮೊದಲು ಕಂಡಾಗ ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳೇ, ಹಸೀನಾಳ ನಡವಳಿಕೆಯನ್ನು ಉದ್ಧಟತನವೆಂದು ಕೋಪಗೊಳ್ಳುತ್ತಾರೆ. ಮೊದಮೊದಲು ಹಸೀನಾಳಿಗೂ ಇಸ್ಲಾಂ ಧರ್ಮದಲ್ಲಿರುವ ಮಹಿಳಾ ಪರ ಹಕ್ಕುಗಳ ಅರಿವೇ ಇಲ್ಲದೆ ಬದುಕು ಮುಗಿಯಿತೆಂದು ಕಣ್ಣೀರಿಡುತ್ತಾ ಮಕ್ಕಳ ಜೀವನವನ್ನು ಸರಿಪಡಿಸಲು ಒದ್ದಾಡುತ್ತಿರುತ್ತಾಳೆ. ಈ ಮಧ್ಯೆ ಹಸೀನಾಳ ಕಣ್ಣು ತೆರೆಸಿದ್ದು ಜುಲೇಖ ಬೇಗಂ, ಹೆಚ್ಚಿನ ತಿಳುವಳಿಕೆಯುಳ್ಳ ಜುಲೇಖ ಹಸೀನಾಳಿಗೆ ಧಾರ್ಮಿಕ ಹಕ್ಕುಗಳ ಬಗ್ಗೆ ತಿಳಿಸಿ ಹೇಳುತ್ತಾಳೆ. ಇಷ್ಟು ತಿಳಿದದ್ದೇ ತಡ ಹಸೀನಾ ತನ್ನ ಹೋರಾಟವನ್ನು ಪ್ರಾರಂಭಿಸಿಯೇ ಬಿಡುತ್ತಾಳೆ. ಜುಲೇಖಳ ಮಾತುಗಳು ಅವಳಿಗೆ ಎಷ್ಟು ಶಕ್ತಿಯನ್ನು ನೀಡುತ್ತವೆ ಎಂದರೆ, ಹಸೀನ ಮೂರು ದಿನಗಳ ಕಾಲ ಉಪವಾಸವಿದ್ದರೂ, ಮಕ್ಕಳು ಹಸಿವಿನಿಂದ ಕಂಗೆಟ್ಟರೂ, ಮಳೆ ಬಂದರೂ, ಚಳಿ ಇದ್ದರೂ, ಯಾವುದಕ್ಕೂ ಸೋಲದೆ ಮಸೀದಿಯ ಮುಂದೆ ನ್ಯಾಯಕ್ಕಾಗಿ ಜಮಾತ್‌ನ

ಕರೆಯುವಂತೆ ಛಲದಿಂದ ಹೋರಾಟಕ್ಕಿಳಿಯುತ್ತಾಳೆ. ಕಣ್ಣು ಕಾಣದ ಮೊದಲ ಮಗಳು ಸದಾ ನಗುಮುಖವನ್ನೇ ಹೊತ್ತು ತನ್ನ ಕಷ್ಟಗಳನ್ನು ಮರೆತು ತನ್ನ ಎರಡು ಚಿಕ್ಕ ತಂಗಿಯರ ಕಾಳಜಿ ವಹಿಸುವ ದೃಶ್ಯಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ ಗಿರೀಶ್ ಕಾಸರವಳ್ಳಿಯವರು.

ಹಸೀನಾಳ ಗುಡಿಸಲು ಮನೆ, ಹರಿದ ಬಟ್ಟೆಗಳು, ಮಕ್ಕಳ ಹಸಿವು ಹಾಗೂ ಅವಳಿಗೆ ಇರುವ ದೈನ್ಯ ಸ್ಥಿತಿ ನೋಡುಗರ ಕಣ್ಣಲ್ಲಿ ನೀರು ಹರಿಯುವಂತೆ ಮಾಡುತ್ತದೆ. ಕಾಸರವಳ್ಳಿಯವರು ತಮ್ಮ ಅನೇಕ ಚಿತ್ರಗಳಲ್ಲಿ ಹೆಣ್ಣಿನ ಸಮಸ್ಯೆಗಳನ್ನು ಕುರಿತು ಹೆಚ್ಚು ಚಿತ್ರಿಸುತ್ತಾ ಬಂದಿದ್ದಾರೆ. ಇದಕ್ಕೆ ಮತ್ತೊಂದು ಉದಾಹರಣೆ ಗುಲಾಬಿ ಟಾಕೀಸ್. ಈ ಸಿನಿಮಾವು ಹಿಂದೂ–ಮುಸ್ಲಿಂ ನಡುವಿನ ಕಾದಾಟವನ್ನು ಪ್ರತಿಬಿಂಬಿಸುತ್ತಾ ಮುಸ್ಲಿಂ ಮಹಿಳೆಯ ಸಮಸ್ಯೆಯನ್ನು ಎತ್ತಿ ತೋರಿಸಿದೆ.

ಕನ್ನಡ ಸಿನಿಮಾ ವಿಮರ್ಶಕರುಗಳಲ್ಲಿ ಒಬ್ಬರಾದ ಡಾ. ಕೆ ಪುಟ್ಟಸ್ವಾಮಿಯವರು ಗಿರೀಶ್ ಕಾಸರವಳ್ಳಿ ಅವರ ಹಸೀನ ಸಿನಿಮಾ ನಿರ್ದೇಶನವನ್ನು ಕುರಿತು ಈ ಕೆಳಗಿನಂತೆ ಹೇಳುತ್ತಾರೆ. "ಸಮಕಾಲಿನ ವಸ್ತು ಒಂದನ್ನು ಹಿಡಿದಿಡಲು ಮಾಡಿರುವ ಧೈರ್ಯ ಮತ್ತು ನಿರ್ವಹಿಸಿರುವ ಕ್ರಮ ವಿಸಿಷ್ಟವಾದುದು. ಇಡೀ ಸಮುದಾಯದ ಎಲ್ಲಾ ಸ್ತರಗಳನ್ನು ಇಲ್ಲಿ ಬಳಸಿರುವ ಭಾಷೆ, ನಿರೂಪಣಾ ಕ್ರಮ, ದೃಶ್ಯ ಸಂಯೋಜನೆ ಬಗ್ಗೆ ಪ್ರತ್ಯೇಕವಾದ ವಿಶ್ಲೇಷಣೆಯೇ ಬೇಕು"[6].

'ಕರಿನಾಗರಗಳು' ಕಥೆಯಲ್ಲಿ ಬಾನು ಮುಷ್ತಾಕ್ ಮುಸ್ಲಿಂ ಧರ್ಮದ ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಚರ್ಚೆಗೆ ತರುತ್ತಾರೆ. ಇಲ್ಲಿ ಆಶ್ರಫಳ ಸಮಸ್ಯೆಯನ್ನು ಹೇಳುತ್ತಲೇ ಆಮಿನಳ ಸಮಸ್ಯೆಯನ್ನು ಓದುಗರ ಆಲೋಚನೆಗೆ ತಂದೊಡ್ಡುತ್ತಾರೆ. ಮುತುವಲ್ಲಿಯ ಕೈಹಿಡಿದ ಆಮಿನ ಚಿಕ್ಕ ವಯಸ್ಸಿಗೆ ಹತ್ತು ಮಕ್ಕಳನ್ನು ಹೆತ್ತು ಸುಸ್ತಾಗಿರುತ್ತಾಳೆ. ಆದರೆ ಮುತ್ತುವಲ್ಲಿ ಮಕ್ಕಳಾಗದಂತೆ ಶಸ್ತ್ರ ಚಿಕಿತ್ಸೆ ಮಾಡಿಸಲು ಒಪ್ಪಿಗೆ ನೀಡುವುದಿಲ್ಲ. ಆಮಿನಳ ಸಮಸ್ಯೆ ಒಂದು ಕಡೆಯಾದರೆ ಆಶ್ರಫಳ ಬಡತನದ ಸಮಸ್ಯೆ ಇನ್ನೊಂದು ಕಡೆ. ಆಶ್ರಫಳ ನೋವು ಓದುಗರ ಮನಸ್ಸಿಗೆ ನಾಟುವಂತೆ ಚಿತ್ರಿಸಿದ್ದಾರೆ. ಅವಳ ದುರ್ದೈವದ ಬದುಕನ್ನು ಬಾನು ಈ ಕೆಳಗಿನಂತೆ ವಿವರಿಸುತ್ತಾರೆ. "ಮಸೀದಿಯ ಉತ್ತರಕ್ಕೆ ಕಟ್ಟಿದ್ದ ಪಡಸಾಲೆಯ ಮುಂಭಾಗದಲ್ಲಿ ಆಶ್ರಫ್ ಮುದುರಿಕೊಂಡು ಕುಳಿತಿದ್ದಳು. ಅವಳ ಮಾಸಿದ ಸೀರೆಯ ಸೆರಗನ್ನು ತಲೆಯ ಮೇಲೆ ಹೊದ್ದಿದಳು. ಮಡಿಲಲ್ಲಿದ್ದ ಕೂಸನ್ನು ಜೀರ್ಣವಾದ ಆ ಸೀರೆಯ ಸೆರಗಿನಲ್ಲಿ ಮುಚ್ಚಿಕೊಂಡಿದ್ದಳು. ತಾಯಿಯ ಪಕ್ಕದಲ್ಲಿ ಹಸೀನ ಕಾಲು ಚಾಚಿ ಆ ಥಂಡಿ ನೆಲದ ಮೇಲೆ ಒರಗಿದ್ದಳು. ಮೂರು ವರ್ಷದ ಹಬೀಬಾ, ಅರ್ಧ ನೆಲದ ಮೇಲೆ ತಾಯಿಯ ಮಡಿಲಲ್ಲಿ ಹುದುಗಲು ಪ್ರಯತ್ನಿಸುತ್ತಿದ್ದಳು"[7]. ಈ ಮೇಲಿನ ದೃಶ್ಯ ಆಶ್ರಫ್‌ಳ ದೈನ್ಯ ಸ್ಥಿತಿಯನ್ನು ಸೂಚಿಸುತ್ತದೆ. ಅವಳ ಹರಿದ, ಮಾಸಿದ ಬಟ್ಟೆ, ಹಸಿವೆ ಮೂರ್ತಿ ಎತ್ತಂತಿದ್ದ ಮಕ್ಕಳು ಇವು ಎಂತಹ ಕಠೋರವಾದ ಮನಸ್ಸುಳ್ಳವರನ್ನು ಕರೆಗಿಸಿಬಿಡುತ್ತದೆ. ಇಷ್ಟೆಲ್ಲ ಕಷ್ಟಗಳಿದ್ದರೂ ಆಶ್ರಫ್ ತನ್ನ ಹೋರಾಟವನ್ನು ನಿಲ್ಲಿಸುವುದಿಲ್ಲ. ಹಸಿವು ಮಂಜುಗಡ್ಡೆಯಂತೆ ತನ್ನ ಒಡಲನ್ನು ಕೊರೆಯುತ್ತಿದ್ದರು ತನ್ನ ಮಕ್ಕಳ ಭವಿಷ್ಯಕ್ಕಾಗಿ ಎಲ್ಲವನ್ನು ಸಹಿಸುತ್ತಾಳೆ. ಕೊನೆಗೆ ಜಮಾತ್ ನಿಂದ ಯಾವ ನ್ಯಾಯವೂ ಅವಳಿಗೆ ಸಿಗುವುದಿಲ್ಲ. ಯಾಕೊಬ್ ಮಸೀದಿಯ ಬಳಿ ಆಶ್ರಫಳನ್ನು ಕಂಡು ವ್ಯಗ್ರಗೊಂಡು ಅವಳನ್ನು ಕಾಲಿನಿಂದ ಜಾಡಿಸಿ ಒದೆಯುತ್ತಾನೆ. ಆ ಒದೆಗೆ ತತ್ತರಿಸಿ ಆಶ್ರಫ್ ನಿಲ್ಲಲಾರದೆ ತಾನು ತಬ್ಬಿಕೊಂಡಿದ್ದ ಮುನ್ನಿಯನ್ನು ಕಾಪಾಡಿಕೊಳ್ಳಲು ಆಗದೆ ದೊಪ್ಪನೆ ಮಸೀದಿಯ ಮೆಟ್ಟಿಲಿನಿಂದ ಕೆಳಗೆ ಬೀಳುತ್ತಾಳೆ. ಮುನ್ನಿ ತಾಯಿಯಿಂದ ಬೇರ್ಪಟ್ಟು ಮತ್ತೊಂದು ಮೆಟ್ಟಿಲಿಗೆ ಢಿಕ್ಕಿ ಒಡೆದು ಕೆಳಗೆ ಬೀಳುತ್ತಾಳೆ. ಬಿದ್ದ ಮುನ್ನಿಯನ್ನು ಆಶ್ರಫ್ ಎತ್ತಿಕೊಂಡಾಗ ಮುನ್ನಿ ಎಂದೂ ಬಾರದ ಲೋಕಕ್ಕೆ ಹೊರಟು ಹೋಗಿರುತ್ತಾಳೆ. ಬಾನು ಇಲ್ಲಿಯೂ ಸಹ ಮುನ್ನಿಯ ಸಾವನ್ನು ಕರುಳು

ಕಿವಿಚುವಂತೆ ವರ್ಣಿಸಿದ್ದಾರೆ. "ಕೆಲವರು ಮುನ್ನಿ ಬಳಿ ಸಾರಿದರು. ಮುನ್ನಿಯ ಜ್ವರ ಇಳಿದಿತ್ತು, ಉಸಿರಾಟದ ಆವೇಗವಿರಲಿಲ್ಲ, ಸಂಕಟವಿರಲಿಲ್ಲ, ನೋವಿರಲಿಲ್ಲ ಅವಳು ಈ ಪ್ರಪಂಚದ ಎಲ್ಲಾ ನೋವಿನಿಂದಲೂ ಮುಕ್ತಳಾಗಿದ್ದರು. ಅವಳ ಯಾತನೆಯ ಬದುಕು ಕೊನೆಗೊಂಡಿತು. ಬದುಕುವ ಛಲದಿಂದ ಹೋರಾಟ ಮಾಡುತ್ತಿದ್ದ ಅವಳ ದೇಹ ಕರಿಚಾದರದೊಳಗೆ ಮರೆಯಾಯಿತು". ಈ ದಾರುಣ ಸನ್ನಿವೇಶ ಓದುಗರ ಮನಸ್ಸನ್ನು ಕಲಕುತ್ತದೆ. ಇದಾದ ನಂತರ ಆಶ್ರಫ್ ತನ್ನ ಕಣ್ಣೀರನ್ನು ಶಾಶ್ವತವಾಗಿ ನಿಲ್ಲಿಸುತ್ತಾಳೆ. ಇಡೀ ಇಸ್ಲಾಂ ಸಮುದಾಯದ ಬಗ್ಗೆ ತಿರಸ್ಕಾರವನ್ನು ಹೊಂದುತ್ತಾಳೆ.

ಈ ಕಥೆಗಳನ್ನು ಬರೆದಾಗ ಬಾನು ಸ್ವತಃ ತಮ್ಮ ಸಮಾಜದಿಂದ ಬಹಿಷ್ಕಾರಗೊಂಡಿದ್ದರು. ಹಾಸನದ ಅವರ ತವರೂರಲ್ಲಿ ಅವರ ಸಮುದಾಯದ ಮುತ್ತುವಲ್ಲಿ ಅವರು ಫತ್ವ ಹೊರಡಿಸಿ ಅವರ ಇಡೀ ಕುಟುಂಬವನ್ನು ಬಹಿಷ್ಕಾರ ಮಾಡಿರುತ್ತಾರೆ ಎಂಬ ಮಾತನ್ನು ನಾವು ಬಾನುರವರ ಮಾತಿನಲ್ಲಿ ಕೇಳಬಹುದು. ಇಷ್ಟೆಲ್ಲಾ ಕಷ್ಟದ ದಿನಗಳನ್ನು ಸಹಿಸಿಕೊಂಡು ಬಾನು ರವರು ತಮ್ಮ ಸಮುದಾಯದ ಹೆಣ್ಣು ಮಕ್ಕಳಿಗೆ ಶಿಕ್ಷಣ, ಸಮಾನತೆ, ಆರ್ಥಿಕ ಪರಾವಲಂಬನೆ, ಸಾಂಸ್ಕೃತಿಕ ಸ್ವತಂತ್ರ, ಧಾರ್ಮಿಕ ಸ್ವಾತಂತ್ರ್ಯ ಸಿಗಬೇಕೆಂದು ಬಂಡಾಯ ಸಾಹಿತ್ಯದ ಮೂಲಕ ಪತ್ರಕರ್ತೆಯಾಗಿ, ವಕೀಲೆಯಾಗಿ ಇಂದಿಗೂ ಸಹ ಹೋರಾಟವನ್ನು ನಡೆಸುತ್ತಿದ್ದಾರೆ. ಬಾನುರವರು ಸ್ವತಂತ್ರ್ಯ ಭಾರತದ ಪ್ರಜಾಪ್ರಭುತ್ವಕ್ಕೆ ಅಡಿಪಾಯವಾದ ಭಾರತದ ಸಂವಿಧಾನದಿಂದ ಹೆಚ್ಚು ಪ್ರಭಾವಿತರಾಗಿರುವುದನ್ನು ಕಾಣಬಹುದು. ನಮ್ಮ ಸಂವಿಧಾನವು ಪ್ರತಿಯೊಬ್ಬ ಕಟ್ಟಕಡೆಯ ವ್ಯಕ್ತಿಗೂ ಸಮಾಜಿಕ ನ್ಯಾಯ ಒದಗಿಸುವ ಮಹನ್ ಕಾನೂನು ಗ್ರಂಥವಾಗಿದೆ. ಇಂತಹ ಸಂವಿಧಾನದ ಅಡಿಯಲ್ಲಿ ಸೌಲಭ್ಯಗಳನ್ನು ಪಡೆದ ಬಾನುರವರು ಸಂವಿಧಾನ ಕಾನೂನುಗಳ ಅರಿವು ಹಾಗೂ ಮಹಿಳೆಯರ ರಕ್ಷಣೆಯ ಮೂಲ ಆಯುಧ ಎಂದು, ಎಲ್ಲಾ ಸಮುದಾಯದ ಶೋಷಿತ ಹೆಣ್ಣು ಮಕ್ಕಳಿಗೆ ಮುಕ್ತಿಯ ಮಾರ್ಗವೆಂದು ತಿಳಿಸುವ ಮೂಲಕ ತನ್ನ ಹಂಬಲವನ್ನು ಹೊಂದಿರುವುದು ಅವರ ಕೃತಿಗಲ್ಲಿ ಕಾಣಬಹುದು. ಇವರ ಈ ಬರಹಗಳಿಂದ ಅನೇಕ ಮುಸ್ಲಿಂ ಹೆಣ್ಣು ಮಕ್ಕಳು ಸ್ವತಂತ್ರರಾಗಿ ತಮ್ಮ ಜೀವನವನ್ನು ಕಟ್ಟಿಕೊಂಡಿರುವುದನ್ನು ನಾವು ಕಾಣಬಹುದು. ಹೀಗೆ ಕಾಸರವಳ್ಳಿ ಅವರು ಈ ಸಿನಿಮಾವನ್ನು ನಿರ್ದೇಶನವನ್ನು ಮಾಡುವಾಗ ಭಯಗೊಂಡಿದ್ದು. ಇದೆ ಕಾರಣ ಮುಸ್ಲಿಂ ಸಮುದಾಯದವರು ಚಿತ್ರೀಕರಣದ ವೇಳೆ ಅಡ್ಡಿ ಪಡಿಸಬಹುದೆಂದು, ಆದರೆ ಹಾಗೆ ಯಾವ ಸಮಸ್ಯೆಯೂ ಆಗಲಿಲ್ಲ ಎಂಬುದು ಅವರ ನಂತರ ಮಾತುಗಳು ಸ್ಪಷ್ಟಪಡಿಸುತ್ತವೆ.

**ಉಪಸಂಹಾರ:**

ಹೀಗೆ ಸಿನಿಮಾ ಮತ್ತು ಕಥೆಗಳಲ್ಲಿ ಒಂದೇ ಸನ್ನಿವೇಶವನ್ನು ವಿಭಿನ್ನವಾದ ರೀತಿಯಲ್ಲಿ ಚಿತ್ರಿಸಿರುವುದನ್ನು ನಾವು ಗಮನಿಸಬಹುದು. ಒಟ್ಟಾರೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಸ್ವತಂತ್ರ, ಸಮಾನತೆ ಹಕ್ಕುಗಳಿಗಾಗಿ ಹಿಂದಿನಿಂದ ಇಂದಿನವರೆಗೂ ಅನೇಕ ಹೋರಾಟಗಳು ನಡೆಯುತ್ತಲೆ ಇದ್ದರೂ, ಇವುಗಳ ಫಲವಾಗಿ ಕೆಲವು ಬದಲಾವಣೆಗಳು ಬಂದಿದ್ದರೂ, ಇನ್ನೂ ಹೆಚ್ಚಿನ ತಿಳುವಳಿಕೆ, ಜಾಗರೂಕತೆ, ಕಾಳಜಿ, ಪ್ರೀತಿ ಬರಬೇಕಿದೆ. ಬಾನುರವರಿಗಿಂತ ಹಿಂದೆಯೇ ಸಾರಾ ಅಬೂಬಕ್ಕರ್ ರವರು ಮೊದಲ ಬಾರಿಗೆ ಮುಸ್ಲಿಂ ಸಮುದಾಯದ ಮಹಿಳಾ ಸಮಸ್ಯೆಗಳ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ್ದರು .ಇವರ ಜೊತೆಗೆ ಬಾನು ರವರು ಸಹ ಮುಸ್ಲಿಂ ಮಹಿಳಾ ಸಮಸ್ಯೆಗಳನ್ನು ಕೇಂದ್ರೀಕರಿಸಿದ್ದಾರೆ. ಬಾನುರವರ ಹಸೀನಾ ಕಥೆಯಿಂದ ತಿಳಿದುಬರುವುದೇನೆಂದರೆ ಮುಸ್ಲಿಂ ಸಮಾಜದಲ್ಲಿಯೂ ಸಹ ಧಾರ್ಮಿಕ ಆಚರಣೆಗಳನ್ನು ಪುರುಷ ತನಗೆ ಬೇಕಾದ ರೀತಿಯಲ್ಲಿ ತಿರುಚಿ ಮಹಿಳೆಯರ ಶೋಷಣೆ ಮಾಡುತ್ತಾ ಬರುತ್ತಿದ್ದಾನೆ ಎಂಬುದು, ಇದಕ್ಕೆ ಕಾರಣ ಮಹಿಳೆಯರನ್ನು

ಶಿಕ್ಷಣದಿಂದ ವಂಚಿಸಿರುವುದು ಮುಖ್ಯವೆನಿಸುತ್ತದೆ. ಶಿಕ್ಷಣ ಪಡೆದ ಜುಲೇಖ ಶಿಕ್ಷಣ ಪಡೆಯದ ಆಶ್ರಫ್ ಇವರಿಬ್ಬರ ನಡುವೆ ಇರುವ ವ್ಯತ್ಯಾಸವನ್ನೇ ನಾವು ಕಥೆಯಲ್ಲಿ ಕಾಣಬಹುದು. ಶಿಕ್ಷಣ ನೀಡಿದರೆ ಅದರ ಅರಿವಿನಿಂದ ಮಹಿಳೆ ತನ್ನ ಹಕ್ಕುಗಳನ್ನು ಕೇಳುತ್ತಾಳೆ ಎಂಬ ಭಯದಿಂದ ಎಲ್ಲಾ ಸಮುದಾಯಗಳು ಅವಳನ್ನು ಮೌಢ್ಯದಲ್ಲಿ ಇರಿಸಿರುವುದನ್ನು ನಾವಿಲ್ಲಿ ಗಮನಿಸಬಹುದು. ಈ ಕಥೆಯು ಕೇವಲ ಮುಸ್ಲಿಂ ಮಹಿಳಾ ಸಮುದಾಯದ ಸಮಸ್ಯೆಗಳ ಅಭಿವ್ಯಕ್ತಿ ಮಾತ್ರವಾಗಿರದೆ ಭಾರತದ ಎಲ್ಲಾ ಮಹಿಳಾ ಸಮುದಾಯದ ಸಮಸ್ಯೆಗಳ ಅಭಿವ್ಯಕ್ತಿಯಾಗಿದೆ ಎಂದರೆ ಅತಿಶಯೋಕ್ತಿ ಎಂದೇನು ಅನಿಸುವುದಿಲ್ಲ.

**ಕೊನೆಟಿಪ್ಪಣಿಗಳು:**

1. ಬಾನು ಮುಷ್ತಾಕ್. (2025) *ಹಸೀನಾ ಮತ್ತು ಇತರ ಕಥೆಗಳು.* ಅಭಿರುಚಿ ಪ್ರಕಾಶನ ಪುಟ. 121.
2. ಅದೇ., ಪುಟ. 122.
3. ಅದೇ., ಪುಟ. 131.
4. ಅದೇ., ಪುಟ. 131.
5. ಅದೇ., ಪುಟ. 134.
6. ಪುಟ್ಟಸ್ವಾಮಿ,ಕೆ. (2019). ಸಿನಿಮಾ ಯಾನ, ಕನ್ನಡ ಚಿತ್ರರಂಗ 75 ಒಂದು ಫ್ಲಾಶ್ ಬ್ಯಾಕ್, (ಮೂರನೇ ಮುದ್ರಣ) ಅಭಿನವ, ಪುಟ. 216.
7. ಬಾನು ಮುಷ್ತಾಕ್. (2025). ಪೂರ್ವೋಕ್ತ. ಪುಟ. 121–122.

**ಪರಾಮರ್ಶನ ಗ್ರಂಥಗಳ**


- ಬಾನು ಮುಷ್ತಾಕ್. (2025). *ಹಸೀನಾ ಮತ್ತು ಇತರ ಕಥೆಗಳು.* ಅಭಿರುಚಿ ಪ್ರಕಾಶನ.
- ಗಂಗಾಧರ ಮೊದಲಿಯಾರ್. (2008). *ಕನ್ನಡ ಸಿನಿಮಾ ಇತಿಹಾಸ ಪುಟಗಳಲ್ಲಿ.* ಕನ್ನಡ ಪುಸ್ತಕ ಪ್ರಾಧಿಕಾರ.
- ಗಿರೀಶ್ ಕಾಸರವಳ್ಳಿ. (2004). *ಹಸೀನಾ* (ಸಿನಿಮಾ).
- ಗೋಪಾಲಕೃಷ್ಣ ಪೈ ಮತ್ತು ಗಿರೀಶ್ ಕಾಸರವಳ್ಳಿ. (2024). *ಬಿಂಬ ಬಿಂಬನ–ಕಾಸರವಳ್ಳಿ ಚಿತ್ರಗಳ ಸಂಕಥನ,* ವೀರಲೋಕ ಬುಕ್ಸ್ ಪ್ರೈವೇಟ್ ಲಿಮಿಟೆಡ್.
- ಗೋವಿಂದರಾಜು, ಸಿ.ಆರ್. (2018). ಸಿನಿಮಾ ಸಂಕಥನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
- ಹೊನ್ನು ಸಿದ್ಧಾರ್ಥ, ಸಿ.ಬಿ, (2014), ಆಧುನಿಕ ಕನ್ನಡ ಸಾಹಿತ್ಯ–ಮಹಿಳಾ ಸಣ್ಣ ಕಥೆಗಳ ಅವಲೋಕನ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು.
- ಹಾಲತಿ ಸೋಮಶೇಖರ್, (2008). *ಸ್ತ್ರೀಪರ.* ವಿಸ್ಮಯ ಪ್ರಕಾಶನ.
- *ಕನ್ನಡ ಚಲನಚಿತ್ರ ಇತಿಹಾಸ–ಭಾಗ–1* .(2001). ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ.
- ಪುಟ್ಟಸ್ವಾಮಿ, ಕೆ. (2021). ಸಿನಿಮಾ ಯಾನ. *ಕನ್ನಡ ಚಿತ್ರರಂಗ 75 ಒಂದು ಫ್ಲಾಶ್ ಬ್ಯಾಕ್.* ಅಭಿನವ.
- Cherian V K, (2025), Mathrubhumi.
- Deccan Herald, (May 25th,2025), Revisiting Haseena.
- Vijayasarathi R G, (2025), Haseena: A classic tale, rediff.